Azadi Ka Amrit Mahotsav

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001

ಸಂಖ್ಯೆ: ಶಿ.ವ.ಕೋಶ.ಸಾ.ವ/01/2022-23 ದಿನಾಂಕ: 02/06/2023

## : ಪರಿಷ್ಕೃತ ವರ್ಗಾವಣಾ ವೇಳಾಪಟ್ಟಿ :

**ವಿಷಯ:** 2022-23ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಒಳಗೊಂಡಂತೆ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢಶಾಲಾ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು/ಅಧಿಕಾರಿಗಳ ಸಾಮಾನ್ಯ ವರ್ಗಾವಣೆಯನ್ನು ಹಮ್ಮಿಕೊಳ್ಳುವ ಬಗ್ಗೆ

**ಉಲ್ಲೇಖ:**
1. ಈ ಕಛೇರಿಯಿಂದ ಹೊರಡಿಸಲಾಗಿರುವ ವರ್ಗಾವಣಾ ಅಧಿಸೂಚನೆ ದಿನಾಂಕ: 26/12/2022.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 03 ಇಟಿಆರ್ 2023 ದಿನಾಂಕ: 25/01/2023
3. ಈ ಕಛೇರಿ ಪತ್ರ ಸಂಖ್ಯೆ: ವರ್ಗಾವಣೆ ಕೋಶ ಕೌ..ಪ್ರ/2020-21 ದಿನಾಂಕ: 24/01/2023
4. ಸರ್ಕಾರದ ಪತ್ರ ಸಂಖ್ಯೆ: ಇಪಿ 03 ಇಟಿಆರ್ 2023 ದಿನಾಂಕ: 31/05/2023

*********

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ-2020 [2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 04] ಹಾಗೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು-2020ರ ನಿಯಮಗಳಂತೆ, ಹಾಗೂ ವರ್ಗಾವಣಾ ತಿದ್ದುಪಡಿ ಕಾಯ್ದೆ ಮತ್ತು ನಿಯಮ-2022ರ ಪ್ರಕಾರ ಉಲ್ಲೇಖ-1ರಲ್ಲಿ ಈಗಾಗಲೇ ಅಧಿಸೂಚನೆ ಸಹಿತ ವರ್ಗಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು, ಉಲ್ಲೇಖ-3 ಮತ್ತು 4 ರಲ್ಲಿ ಸರ್ಕಾರದ ಆದೇಶದಂತೆ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿತ್ತು.

ಪ್ರಸ್ತುತ ಉಲ್ಲೇಖ-4 ರ ಸರ್ಕಾರದ ಪತ್ರದಲ್ಲಿ ಹೆಚ್ಚುವರಿ ಶಿಕ್ಷಕರ ಹಾಗೂ ಸಾಮಾನ್ಯ ವರ್ಗಾವಣಾ ಪ್ರಕ್ರಿಯೆಯನ್ನು ಮುಂದುವರೆಸಲು ಸರ್ಕಾರವು ಅನುಮತಿಯನ್ನು ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ವರ್ಗಾವಣಾ ವೇಳಾಪಟ್ಟಿಯನ್ನು ಕೆಳಕಂಡಂತೆ ಪರಿಷ್ಕರಿಸಿದೆ. ಉಳಿದಂತೆ ದಿನಾಂಕ:26/12/2022ರಂದು ಹೊರಡಿಸಲಾದ ವರ್ಗಾವಣಾ ಅಧಿಸೂಚನೆಯಲ್ಲಿರುವ ಎಲ್ಲಾ ಮಾರ್ಗಸೂಚಿ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತದೆ. ಈ ವೇಳಾಪಟ್ಟಿಯ ಜೊತೆಯಲ್ಲಿ ಸದರಿ ಮಾರ್ಗಸೂಚಿ ಅಂಶಗಳನ್ನು ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ-2020 [2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 04] ಹಾಗೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು-2020 ಹಾಗೂ ವರ್ಗಾವಣಾ ತಿದ್ದುಪಡಿ ಕಾಯ್ದೆ ಮತ್ತು ನಿಯಮಗಳು-2022ನ್ನು ಹೆಚ್ಚಿನ ವಿವರಣೆಗಾಗಿ ಓದಿಕೊಳ್ಳತಕ್ಕದ್ದು.

## ಪರಿಷ್ಕೃತ ವರ್ಗಾವಣಾ ವೇಳಾಪಟ್ಟಿ *** :

| ಕ್ರ.ಸ | ವಿವರ | ವೃಂದ | | | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|---|---|
| | ವರ್ಗಾವಣೆ ವಿಧ | ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ | ಪ್ರೌಢಶಾಲಾ ಶಿಕ್ಷಕರ ವೃಂದ | ಪ್ರೌಢಶಾಲಾ ಮುಖ್ಯಶಿಕ್ಷಕರ ವೃಂದ | |
| **1** | **ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆ ಕೌನ್ಸಿಲಿಂಗ್ ಕ್ರಮಗಳು** | | | | |
| ಅ | ಹೆಚ್ಚುವರಿ ಶಿಕ್ಷಕರ ಪರಿಷ್ಕೃತ ಕರಡು ಪಟ್ಟಿ ಪ್ರಕಟಣೆ | 06/06/2023 | 06/06/2023 | ---- | ಕ್ಷೇತ್ರಶಿಕ್ಷಣಾಧಿಕಾರಿಗಳು /ಉಪನಿರ್ದೇಶಕರು ಆಯುಕ್ತರ ಕಛೇರಿಯ ಇ-ಆಡಳಿತ ವಿಭಾಗದ ಸಹಯೋಗದೊಂದಿಗೆ. |
| ಆ | ವರ್ಗಾವಣಾ ತಂತ್ರಾಂಶದ ಮುಖಾಂತರ<br>• ಮೇಲಿನಂತೆ ಹೆಚ್ಚುವರಿ ಪಟ್ಟಿಯಲ್ಲಿರುವ ಶಿಕ್ಷಕರು ಆನ್‌ಲೈನ್‌ನಲ್ಲಿ ಆಕ್ಷೇಪಣೆಗಳನ್ನು (ಆದ್ಯತೆ/ ವಿನಾಯಿತಿ/ ಇತರೆ ಸೇರಿದಂತೆ) ಸಲ್ಲಿಸಲು | 06/06/2023 ರಿಂದ 10/06/2023 | 06/06/2023 ರಿಂದ 10/06/2023 | ಸಮರ್ಪಕ ಮರುಹಂಚಿಕೆ ಕ್ರಮಗಳು ಅನ್ವಯವಾಗುವುದಿಲ್ಲ. | ಸಂಬಂಧಿಸಿದ ಶಿಕ್ಷಕರು ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು / ಜಿಲ್ಲಾ |

2/6 2023

| | | | | | |
|---|---|---|---|---|---|
| | • ಸೆಕ್ಷನ್ 10ರ (1)ರಿಂದ(1V)ರವರೆಗಿನ ವಿನಾಯಿತಿ ಕೋರಿರುವವರು ಈಗಾಗಲೇ ಸಲ್ಲಿಸಿರುವ ದಾಖಲೆಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು (Accept) ಮಾಡಿದ್ದಲ್ಲಿ ಸದರಿ ದಾಖಲೆಗಳ ಆಧ್ಯತೆಯನ್ನು ಪರಿಗಣಿಸಲಾಗುವುದು. ಮತ್ತೊಮ್ಮೆ ಕ್ಲೇಮ್ ಮಾಡುವ ಅವಶ್ಯಕತೆ ಇರುವುದಿಲ್ಲ.<br>• ಆಧ್ಯತೆಗಳು / ವಿನಾಯಿತಿಗಳನ್ನು ಇಂದೀಕರಿಸಲು 31/05/2023 ರಂತೆ ಅವಕಾಶ ಮಾಡಿಕೊಡಲಾಗಿದೆ. [ಆದ್ಯತೆ ಕೋರುವ ಪ್ರಕರಣಗಳಲ್ಲಿ ಅಗತ್ಯವಾದ ದಾಖಲೆಗಳನ್ನು ಸ್ಪಷ್ಟವಾಗಿ ಕಾಣುವ ರೀತಿಯಲ್ಲಿ ಅಪ್‌ಲೋಡ್ ಮಾಡದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳ ಹಂತದಲ್ಲಿಯೇ ತಿರಸ್ಕರಿಸಲು ಕ್ರಮವಹಿಸುವುದು] | | | | ಉಪನಿರ್ದೇಶಕರು |
| ಇ | ಹೆಚ್ಚುವರಿ ಶಿಕ್ಷಕರು ಸಲ್ಲಿಸಿರುವ ಆಕ್ಷೇಪಣೆಯಲ್ಲಿನ ದಾಖಲೆಗಳ ಪರಿಶೀಲನೆ/ ಅಂಗೀಕಾರ/ ತಿರಸ್ಕಾರ. | 06/06/2023 ರಿಂದ 13/06/2023 | 06/06/2023 ರಿಂದ 13/06/2023 | ಸಮರ್ಪಕ ಮರುಹಂಚಿಕೆ ಕ್ರಮಗಳು ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು / ಜಿಲ್ಲಾ ಉಪನಿರ್ದೇಶಕರು |
| ಈ | ಅಂತಿಮ ತಾತ್ಕಾಲಿಕ ಆಧ್ಯತಾ ಪಟ್ಟಿ ಪ್ರಕಟಣೆ | 14/06/2023 | 14/06/2023 | ಸಮರ್ಪಕ ಮರುಹಂಚಿಕೆ ಕ್ರಮಗಳು ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು / ಜಿಲ್ಲಾ ಉಪನಿರ್ದೇಶಕರು |
| ಉ | ಆದೇಶದಿಂದ ಭಾದಿತರಾದ ಶಿಕ್ಷಕರು ಕುಂದುಕೊರತೆ ನಿವಾರಣಾ ಅಧಿಕಾರಿಗಳನ್ನು (ವಿಭಾಗೀಯ ಸಹನಿರ್ದೇಶಕರು) ಸಂಪರ್ಕಿಸಲು ನಿಗಧಿಪಡಿಸಿದ ಅವಧಿ. | 15/06/2023 | 15/06/2023 | ಸಮರ್ಪಕ ಮರುಹಂಚಿಕೆ ಕ್ರಮಗಳು ಅನ್ವಯವಾಗುವುದಿಲ್ಲ. | ವಿಭಾಗೀಯ ಸಹನಿರ್ದೇಶಕರು. |
| ಊ | ಅಂತಿಮ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ ನಂತರ ಕ್ಷೇತ್ರಶಿಕ್ಷಣಾಧಿಕಾರಿಗಳು ಪ್ರಕಟಿಸುವ ಪುರಸ್ಕೃತ/ ತಿರಸ್ಕೃತ ಪಟ್ಟಿಯಿಂದ ಭಾದಿತರಾಗುವ ಶಿಕ್ಷಕರು ಸಲ್ಲಿಸುವ ಮನವಿಯ ಇತ್ಯರ್ಥ ಹಾಗೂ ಇಂಧೀಕರಣ. | ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಆಯಾ ಕಛೇರಿ ಮುಖ್ಯಸ್ಥರು. ಆಲಿಕೆ ದಿನಾಂಕ: 16/06/2023 ರಂದು ವಿಭಾಗೀಯ ಸಹ ನಿರ್ದೇಶಕರು ವ್ಯಾಪ್ತಿಯ ಉಪನಿರ್ದೇಶಕರೊಂದಿಗೆ ಸಮಾಲೋಚಿಸಿ ಶಿಕ್ಷಕ ವಲಯದ ಮಾಹಿತಿಗೆ ವ್ಯಾಪಕವಾಗಿ ಪ್ರಚುರಪಡಿಸತಕ್ಕದ್ದು. ಆಲಿಕೆ ಪ್ರಕ್ರಿಯೆಯನ್ನು ಹಮ್ಮಿಕೊಂಡು ಸೂಕ್ತ ಲಿಖಿತ ಸಮಜಾಯಿಷಿಯನ್ನು ಸಂಬಂಧಿತರಿಗೆ ನೀಡತಕ್ಕದ್ದು. ನಂತರ ವಿಭಾಗೀಯ ಜಂಟಿನಿರ್ದೇಶಕರು ಮೇಲಿನ ಪ್ರಕ್ರಿಯೆಯಲ್ಲಿ ಸಿಂಧುವಾದ ಆಕ್ಷೇಪಣೆಗಳುಳ್ಳ ಅರ್ಜಿಗಳು ಸಲ್ಲಿಕೆಯಾಗಿದ್ದಲ್ಲಿ ಆ ಬಗ್ಗೆ ಕಾರಣ ಸಹಿತ ನಮೂದಿಸಿ ಕೌನ್ಸಿಲಿಂಗ್‌ಗೆ ಅರ್ಹರಿರುವ ಶಿಕ್ಷಕರ ಪಟ್ಟಿಯನ್ನು ಅಂತಿಮ ಗೊಳಿಸುವುದು | | ಸಮರ್ಪಕ ಮರುಹಂಚಿಕೆ ಕ್ರಮಗಳು ಅನ್ವಯವಾಗುವುದಿಲ್ಲ. | ವಿಭಾಗೀಯ ಸಹನಿರ್ದೇಶಕರು. |
| ಋ | ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆ ಕೌನ್ಸಿಲಿಂಗ್‌ಗೆ ಅರ್ಹರಿರುವ ಶಿಕ್ಷಕರ ಅಂತಿಮ ಆಧ್ಯತಾ ಪಟ್ಟಿ<br>ಎಲ್ಲಾ ವೃಂದವಾರು, ಶಾಲಾವಾರು ವಿಷಯವಾರು ಪ್ರಕಟಣೆ(ತಾಲ್ಲೂಕುವಾರು/ ಜಿಲ್ಲಾವಾರು) | 17/06/2023 | 17/06/2023 | ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| ೠ | ಕೌನ್ಸಿಲಿಂಗ್‌ಗೆ ಲಭ್ಯವಿರುವ ವೃಂದವಾರು ವಿಷಯವಾರು ಖಾಲಿ ಹುದ್ದೆಗಳ ಪ್ರಕಟಣೆ | 17/06/2023 | 17/06/2023 | ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| ಎ | ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹೊಂದಾಣಿಕೆ ಕೌನ್ಸಿಲಿಂಗ್ **ಬ್ಲಾಕ್ ಹಂತ (ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರವರಿಂದ ಕೌನ್ಸಿಲಿಂಗ್)** | 20/06/2023 ಪೂರ್ವಾಹ್ನ | 20/06/2023 ಅಪರಾಹ್ನ | ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| ಏ | ಬ್ಲಾಕ್ ಹಂತದ ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹೊಂದಾಣಿಕೆಯ ನಂತರ ತಾಲ್ಲೂಕಿನಲ್ಲಿ ಖಾಲಿ ಹುದ್ದೆ ಲಭ್ಯವಿಲ್ಲದೆ ಉಳಿಕೆಯಾಗುವ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ **ಜಿಲ್ಲಾ ಹಂತದಲ್ಲಿ** | 21/06/2023 ಪೂರ್ವಾಹ್ನ | 21/06/2023 ಅಪರಾಹ್ನ | ಅನ್ವಯವಾಗುವುದಿಲ್ಲ | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |

2/6 2/6/2023

| | | | | | |
|---|---|---|---|---|---|
| ಐ | ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ನಂತರ ಉಳಿಕೆಯಾಗುವ ಹೆಚ್ಚುವರಿ ಶಿಕ್ಷಕರನ್ನು ಜಿಲ್ಲೆಯೊಳಗೆ ಪಿ.ಟಿ.ಆರ್ ಪ್ರಕಾರ ಅತೀ ಹೆಚ್ಚಿನ ಮಕ್ಕಳ ದಾಖಲಾತಿ ಇರುವ ಶಾಲೆಗಳಲ್ಲಿ ಇಳಿಕೆ ಕ್ರಮಾಂಕದಲ್ಲಿ ಶಿಕ್ಷಕರ ಮರುಹೊಂದಾಣಿಕೆ ಕ್ರಮಗಳು-**ಜಿಲ್ಲಾ ಹಂತದಲ್ಲಿ** | 22/06/2023 ಪೂರ್ವಾಹ್ನ | 22/06/2023 ಅಪರಾಹ್ನ | ಅನ್ವಯವಾಗುವುದಿಲ್ಲ. | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| **2** | **ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ /ಅಧಿಕಾರಿಗಳ ವರ್ಗಾವಣೆ ಕ್ರಮಗಳು** | | | | |
| ಅ | ದಿನಾಂಕ 31/05/2023ಕ್ಕೆ ಗರಿಷ್ಠ 5 ವರ್ಷದ ಅವಧಿ ಪೂರ್ಣಗೊಂಡು ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು/ಅಧಿಕಾರಿಗಳ ಪಟ್ಟಿ ಪ್ರಕಟಣೆ. | 08/06/2023 | 08/06/2023 | 08/06/2023 | ಜಂಟಿ ನಿರ್ದೇಶಕರು(ಆಡಳಿತ)/ ಉಪನಿರ್ದೇಶಕರು [ಆಡಳಿತ] ಹಾಗೂ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು ರವರ ಸಹಯೋಗದೊಂದಿಗೆ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು(ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲ್ಬುರ್ಗಿ |
| | ಪ್ರಕಟಿತ ಪಟ್ಟಿಗೆ ಆಕ್ಷೇಪಣೆ/ಆದ್ಯತೆಯನ್ನು ಕ್ಲೇಮ್ ಮಾಡಲು ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಇಂದೀಕರಿಸಿ ಸಲ್ಲಿಸಲು ನಿಗಧಿಪಡಿಸಿದ ಅವಧಿ | 08/06/2023 ರಿಂದ 14/06/2023 | 08/06/2023 ರಿಂದ 14/06/2023 | 08/06/2023 ರಿಂದ 14/06/2023 | |
| ಆ | ಸಲ್ಲಿಸಿರುವ ಆಕ್ಷೇಪಣ/ಆಧ್ಯತೆಗಳನ್ನು ಪರಿಶೀಲಿಸಿ, ಅರ್ಜಿಗಳ ಪುರಸ್ಕಾರ/ತಿರಸ್ಕಾರ ಅಂತಿಮಗೊಳಿಸುವುದು. | 08/06/2023 ರಿಂದ 15/06/2023 | 08/06/2023 ರಿಂದ 15/06/2023 | 08/06/2023 ರಿಂದ 15/06/2023 | |
| ಇ | ಆಕ್ಷೇಪಣೆ ಪರಿಶೀಲನೆ ನಂತರ ನಿರ್ದಿಷ್ಟಪಡಿಸಿದ ಹುದ್ದೆಗಳ ಗರಿಷ್ಠ ಅವಧಿ (5-ವರ್ಷ) ಪೂರ್ಣಗೊಳಿಸಿದವರ ಆಧ್ಯತಾ ಪಟ್ಟಿ ಪ್ರಕಟಣೆ. | 17/06/2023 | 17/06/2023 | 17/06/2023 | |
| ಈ | ಪ್ರಕಟಿತ ತಾತ್ಕಾಲಿಕ ಆಧ್ಯತಾ ಪಟ್ಟಿಯ ಆದೇಶದಿಂದ ಬಾಧಿತರಾದ ಶಿಕ್ಷಕರು ಕುಂದುಕೊರತೆ ನಿವಾರಣಾ ಅಧಿಕಾರಿಗಳನ್ನು ಸಂಪರ್ಕಿಸಲು ನಿಗಧಿಪಡಿಸಿದ ಅವಧಿ. | 17/06/2023 ರಿಂದ 18/06/2023 | 17/06/2023 ರಿಂದ 18/06/2023 | 17/06/2023 ರಿಂದ 18/06/2023 | ಜಂಟಿ ನಿರ್ದೇಶಕರು(ಆಡಳಿತ)/ ಉಪನಿರ್ದೇಶಕರು [ಆಡಳಿತ] ಹಾಗೂ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು ರವರ ಸಹಯೋಗದೊಂದಿಗೆ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು(ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲ್ಬುರ್ಗಿ |
| ಉ | ಅಂತಿಮ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ ನಂತರ ಕ್ಷೇತ್ರಶಿಕ್ಷಣಾಧಿಕಾರಿಗಳು ಪ್ರಕಟಿಸುವ ಪುರಸ್ಕೃತ/ ತಿರಸ್ಕೃತ ಪಟ್ಟಿಯಿಂದ ಬಾಧಿತರಾಗುವ ಶಿಕ್ಷಕರು ಸಲ್ಲಿಸುವ ಮನವಿಯ ಇತ್ಯರ್ಥ ಹಾಗೂ ಇಂದೀಕರಣ | ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಆಯಾ ಕಛೇರಿ ಮುಖ್ಯಸ್ಥರು. ದಿನಾಂಕ: 21/06/2023 ರಂದು ವಿಭಾಗೀಯ ಸಹ ನಿರ್ದೇಶಕರು ವ್ಯಾಪ್ತಿಯ ಉಪನಿರ್ದೇಶಕರೊಂದಿಗೆ ಸಮಾಲೋಚಿಸಿ ಶಿಕ್ಷಕ ವಲಯದ ಮಾಹಿತಿಗೆ ವ್ಯಾಪಕವಾಗಿ ಪ್ರಚುರಪಡಿಸತಕ್ಕದ್ದು. ಆಲಿಕೆ ಪ್ರಕ್ರಿಯೆಯನ್ನು ಹಮ್ಮಿಕೊಂಡು ಸೂಕ್ತ ಲಿಖಿತ ಸಮಜಾಯಿಷಿಯನ್ನು ಸಂಬಂಧಿತರಿಗೆ ನೀಡತಕ್ಕದ್ದು. ನಂತರ ವಿಭಾಗೀಯ ಸಹನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರು(ಆಡಳಿತ) ಬೆಂಗಳೂರು ಇವರು ಮೇಲಿನ ಪ್ರಕ್ರಿಯೆಯಲ್ಲಿ ಸಿಂಧುವಾದ ಆಕ್ಷೇಪಣೆಗಳುಳ್ಳ ಅರ್ಜಿಗಳು ಸಲ್ಲಿಕೆಯಾಗಿದ್ದಲ್ಲಿ ಆ ಬಗ್ಗೆ ಕಾರಣ ಸಹಿತ ನಮೂದಿಸಿ ಕೌನ್ಸಿಲಿಂಗ್‌ಗೆ ಅರ್ಹರಿರುವ ಶಿಕ್ಷಕರ/ಅಧಿಕಾರಿಗಳ ಪಟ್ಟಿಯನ್ನು ಅಂತಿಮಗೊಳಿಸುವುದು | | | |
| ಊ | ವೃಂದವಾರು, ಖಾಲಿ ಹುದ್ದೆಗಳ ಪ್ರಕಟಣೆ ಹಾಗೂ ಆಕ್ಷೇಪಣೆಗಳ ಪರಿಶೀಲನೆ ನಂತರ ಐದು ವರ್ಷ ಪೂರ್ಣಗೊಂಡ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳ ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ. | 22/06/2023 | 22/06/2023 | 23/06/2023 | |
| ಋ | ಅಂತಿಮ ಆದ್ಯತಾ ಪಟ್ಟಿಯಂತೆ ಗರಿಷ್ಠ (05 ವರ್ಷ) ಅವಧಿ ಮುಗಿದ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ.(ಕೋರಿಕೆ ವರ್ಗಾವಣೆ ಪೂರ್ವದಲ್ಲಿ) | 23/06/2023 ಪೂರ್ವಾಹ್ನ | 23/06/2023 ಅಪರಾಹ್ನ | 24/06/2023 | |
| ೠ | ಜಿಲ್ಲಾ ಹಂತದಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಕೌನ್ಸಿಲಿಂಗ್ ನಂತರ ಉಳಿಕೆಯಾಗುವ ಶಿಕ್ಷಕರನ್ನು ಜಿಲ್ಲೆಯೊಳಗೆ ಪಿ.ಟಿ.ಆರ್ ಪ್ರಕಾರ ಅತೀ ಹೆಚ್ಚಿನ ಮಕ್ಕಳ ದಾಖಲಾತಿ ಇರುವ ಶಾಲೆಗಳಲ್ಲಿ ಇಳಿಕೆ ಕ್ರಮಾಂಕದಲ್ಲಿ ಶಿಕ್ಷಕರ ಮರುಹೊಂದಾಣಿಕೆ ಕ್ರಮಗಳು-**ಜಿಲ್ಲಾ ಹಂತದಲ್ಲಿ** | 26/06/2023 | 26/06/2023 | ------ | |

2/6/2023

| 3. | ಸಾಮಾನ್ಯ ಕೋರಿಕೆ ವರ್ಗಾವಣೆಗಳು | | | | |
|---|---|---|---|---|---|
| ಅ | ದಿನಾಂಕ: 31/05/2023ರಂತೆ ಆದ್ಯತೆ ಕ್ಲೇಮ್ ಮಾಡಲು ಬಯಸುವ ಶಿಕ್ಷಕರು ಆದ್ಯತೆಯ ದಾಖಲೆಗಳನ್ನು ಹಾಗೂ ಇತರೆ ಆಕ್ಷೇಪಣೆಗಳಿದ್ದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು. | 07/06/2023 ರಿಂದ 09/06/2023 | 07/06/2023 ರಿಂದ 09/06/2023 | 07/06/2023 ರಿಂದ 09/06/2023 | ಆಯಾ ಕ್ಷೇತ್ರಶಿಕ್ಷಣಾಧಿಕಾರಿಗಳು ಜಂಟಿ ನಿರ್ದೇಶಕರು(ಆಡಳಿತ)/ ಉಪನಿರ್ದೇಶಕರು [ಆಡಳಿತ] ಹಾಗೂ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು ರವರ ಸಹಯೋಗದೊಂದಿಗೆ |
| | ಈಗಾಗಲೇ ಶಿಕ್ಷಕರಿಂದ ಸಲ್ಲಿಕೆಯಾಗಿರುವ ಕೋರಿಕೆ ಮತ್ತು ಪರಸ್ಪರ ವರ್ಗಾವಣಾ ಅರ್ಜಿಗಳನ್ನು ಆಧ್ಯತೆಗೆ ಸಲ್ಲಿಸಲಾಗಿರುವ ದಾಖಲೆಗಳನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ನೈಜತೆ ಪರಿಶೀಲನೆ ಕುರಿತಂತೆ ಕೂಲಂಕುಶವಾಗಿ ಪರಿಶೀಲಿಸಿ ಅಗತ್ಯವಿದ್ದಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಅರ್ಜಿಗಳ ಅಂಗೀಕಾರ ಅಥವಾ ತಿರಸ್ಕಾರ ಮಾಡಲು ಕ್ರಮವಹಿಸುವುದು. ಆಧ್ಯತೆಗೆ ಅರ್ಹರಲ್ಲದ ಅರ್ಜಿಗಳನ್ನು ಸಾಮಾನ್ಯ/ಇತರೆ ಪ್ರಕರಣಗಳೆಂದು ಪರಿಗಣಿಸುವುದು. ದಾಖಲೆಗಳನ್ನು ಪರಿಶೀಲಿಸಿ ತಂತ್ರಾಂಶದಲ್ಲಿ ತಿರಸ್ಕಾರ/ಅಂಗೀಕಾರ ಮಾಡಲು ನಿಗಧಿಪಡಿಸಿರುವ ಅವಧಿ. | 09/06/2023 ರಿಂದ 23/06/2023 | 09/06/2023 ರಿಂದ 23/06/2023 | 09/06/2023 ರಿಂದ 23/06/2023 | |
| ಆ | ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಅರ್ಹರಾದ/ಅನರ್ಹರಾದ ಶಿಕ್ಷಕರ ಅಂತಿಮ ತಾತ್ಕಾಲಿಕ ಆಧ್ಯತಾಪಟ್ಟಿ ಪ್ರಕಟಣೆ. | 28/06/2023 | 28/06/2023 | 28/06/2023 | ಉಪನಿರ್ದೇಶಕರು [ಆಡಳಿತ] |
| ಇ | ಮೇಲಿನಂತೆ ಪ್ರಕಟಿಸಿರುವ ತಾತ್ಕಾಲಿಕ ಆಧ್ಯತಾ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಅವಧಿ.<br>ಜಿಲ್ಲೆಯ ಒಳಗೆ / ವಿಭಾಗದ ಒಳಗೆ / ವಿಭಾಗದ ಹೊರಗೆ ಕೋರಿಕೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಶಿಕ್ಷಕರುಗಳ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಸಲ್ಲಿಕೆಯಾಗುವ ಆಕ್ಷೇಪಣೆಗಳ ಪರಿಶೀಲನೆ ನಂತರ ಇಂದೀಕರಣ ಹಾಗೂ ಅಂತಿಮ ಜ್ಯೇಷ್ಠತಾ ಪಟ್ಟಿ ಪ್ರಕಟಣೆಗೆ ಸಿದ್ಧತೆ. | 28/06/2023 ರಿಂದ 01/07/2023 ರವರೆಗೆ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಆಯಾ ಕಛೇರಿ ಮುಖ್ಯಸ್ಥರು. ಆಲಿಕೆ ದಿನಾಂಕ: 04/07/2023 ಮತ್ತು 05/07/2023 ರಂದು ವಿಭಾಗೀಯ ಜಂಟಿ ನಿರ್ದೇಶಕರು ವ್ಯಾಪ್ತಿಯ ಉಪನಿರ್ದೇಶಕರೊಂದಿಗೆ ಸಮಾಲೋಚಿಸಿ ಶಿಕ್ಷಕ ವಲಯದ ಮಾಹಿತಿಗೆ ವ್ಯಾಪಕವಾಗಿ ಪ್ರಚುರಪಡಿಸತಕ್ಕದ್ದು. ಆಲಿಕೆ ಪ್ರಕ್ರಿಯೆಯವನ್ನು ಹಮ್ಮಿಕೊಂಡು ಸೂಕ್ತ ಲಿಖಿತ ಸಮಜಾಯಿಷಿಯನ್ನು ಸಂಬಂಧಿತರಿಗೆ ನೀಡತಕ್ಕದ್ದು. ನಂತರ ವಿಭಾಗೀಯ ಜಂಟಿನಿರ್ದೇಶಕರು ಮೇಲಿನ ಪ್ರಕ್ರಿಯೆಯಲ್ಲಿ ಸಿಂಧುವಾದ ಆಕ್ಷೇಪಣೆಗಳುಳ್ಳ ಅರ್ಜಿಗಳು ಸಲ್ಲಿಕೆಯಾಗಿದ್ದಲ್ಲಿ ಆ ಬಗ್ಗೆ ಕಾರಣ ಸಹಿತ ನಮೂದಿಸಿ ಕೌನ್ಸಿಲಿಂಗ್‌ಗೆ ಅರ್ಹರಿರುವ ಶಿಕ್ಷಕರ ಪಟ್ಟಿಯನ್ನು ಅಂತಿಮ ಗೊಳಿಸುವುದು | | | |
| ಈ | ಮೇಲಿನಂತೆ ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳಿಗೆ ಅರ್ಜಿ ಸಲ್ಲಿಸಿದ ಶಿಕ್ಷಕರುಗಳ ಜಿಲ್ಲಾ/ವಿಭಾಗ/ಅಂತರ್ ವಿಭಾಗ ಮಟ್ಟದ ಅಂತಿಮ ಅರ್ಹತಾ ಪಟ್ಟಿ ಪ್ರಕಟಣೆ ಮತ್ತು ಕನಿಷ್ಠ (3 ರಿಂದ 5 ವರ್ಷದೊಳಗಡೆ) ನಿರ್ದಿಷ್ಠಪಡಿಸಿದ ಹುದ್ದೆಯಲ್ಲಿನ ಮತ್ತು ತಾಂತ್ರಿಕ ಸಹಾಯಕರನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೆ ಶಿಕ್ಷಕರುಗಳ ಅಂತಿಮ ಆಧ್ಯತಾ ಪಟ್ಟಿ ಪ್ರಕಟಣೆ. ಸಾಮಾನ್ಯ ಕೋರಿಕೆ ವರ್ಗಾವಣಾ ಕೌನ್ಸಿಲಿಂಗ್ ಪ್ರಕ್ರಿಯೆ ಕೆಳಕಂಡಂತೆ ಮುಂದುವರೆಯುತ್ತದೆ. | 07/07/2023 | 07/07/2023 | 07/07/2023 | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಹಾಗೂ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು(ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲ್ಬುರ್ಗಿ ಅಪರ ಆಯುಕ್ತಾಲಯ |

| 4 | (1) ಜಿಲ್ಲಾ ಹಂತದ ವರ್ಗಾವಣೆ ಕೌನ್ಸಿಲಿಂಗ್ ಕ್ರಮಗಳು [ಜಿಲ್ಲೆಯ ಒಳಗೆ] | | | | |
|---|---|---|---|---|---|
| ಕ್ರ.ಸ | ವಿವರ | ಪ್ರಾಥಮಿಕ ಶಿಕ್ಷಕರ ವೃಂದ | ಪ್ರೌಢಶಾಲಾ ಶಿಕ್ಷಕರ ವೃಂದ | ಪ್ರೌಢಶಾಲಾ ಮುಖ್ಯಶಿಕ್ಷಕರ ವೃಂದ | ಕ್ರಮ ವಹಿಸುವ ಅಧಿಕಾರಿಗಳು |
| ಅ | ಕೌನ್ಸಿಲಿಂಗ್‌ಗೆ ಲಭ್ಯವಿರುವ ವೃಂದವಾರು/ ವಿಷಯವಾರು ಖಾಲಿ ಹುದ್ದೆಗಳ ಪ್ರಕಟಣೆ | 10/07/2023 | 10/07/2023 | ಅನ್ವಯವಾಗುವುದಿಲ್ಲ | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| ಆ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಕೋರಿಕೆ ವರ್ಗಾವಣೆಗಳ ಗಣಕೀಕೃತ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ | 11/07/2023<br>12/07/2023 | 13/07/2023 ರಿಂದ 14/07/2023 | ಅನ್ವಯವಾಗುವುದಿಲ್ಲ | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |

2/6/2023

| | | | | | |
|---|---|---|---|---|---|
| | ತಾಲ್ಲೂಕಿನ ಒಳಗೆ ಆಯ್ಕೆ ಬಯಸುವವರಿಗೆ<br>ತಾಲ್ಲೂಕಿನ ಹೊರಗೆ ಆಯ್ಕೆ ಬಯಸುವವರಿಗೆ | | | | |
| ಇ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಪರಸ್ಪರ ವರ್ಗಾವಣೆಗಳ ಗಣಕೀಕೃತ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. | 15/07/2023<br>ಪೂರ್ವಾಹ್ನ | 15/07/2023<br>ಅಪರಾಹ್ನ | ಅನ್ವಯವಾಗುವುದಿಲ್ಲ | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| ಈ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಕನಿಷ್ಠ (3 ರಿಂದ 5 ವರ್ಷದೊಳಗಡೆ) ಅವಧಿ ಮುಗಿದ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ.<br>(ಜಿಲ್ಲೆಯೊಳಗಿನ ಕೋರಿಕೆ ವರ್ಗಾವಣೆ ನಂತರ) | 17/07/2023<br>ಪೂರ್ವಾಹ್ನ | 17/07/2023<br>ಅಪರಾಹ್ನ | ಅನ್ವಯವಾಗುವುದಿಲ್ಲ | ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು |
| **(2) ವಿಭಾಗೀಯ ಹಂತದ ವರ್ಗಾವಣೆ ಕ್ರಮಗಳು [ವಿಭಾಗದ ಒಳಗೆ]** | | | | | |
| ಅ | ಕೌನ್ಸಿಲಿಂಗ್‌ಗೆ ಲಭ್ಯವಿರುವ ವೃಂದವಾರು/ ವಿಷಯವಾರು ಖಾಲಿ ಹುದ್ದೆಗಳ ಪ್ರಕಟಣೆ | 17/07/2023 | 17/07/2023 | 17/02/2023 | ವಿಭಾಗೀಯ ಸಹನಿರ್ದೇಶಕರು. ಜಂಟಿನಿರ್ದೇಶಕರು(ಆಡಳಿತ) ನಿರ್ದೇಶಕರು ಧಾರವಾಡ/ ಕಲಬುರ್ಗಿ ಅಪರ ಆಯುಕ್ತಾಲಯ |
| ಆ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಕೋರಿಕೆ ವರ್ಗಾವಣೆಗಳ ಗಣಕೀಕೃತ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. | 18/07/2023<br>ರಿಂದ<br>20/07/2023 | 21/07/2023<br>ರಿಂದ<br>24/07/2023 | 25/07/2023<br>ಪೂರ್ವಾಹ್ನ | |
| ಇ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಪರಸ್ಪರ ವರ್ಗಾವಣೆಗಳ ಗಣಕೀಕೃತ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. | 25/07/2023<br>ಪೂರ್ವಾಹ್ನ | 25/07/2023<br>ಅಪರಾಹ್ನ | 25/07/2023<br>ಅಪರಾಹ್ನ | ವಿಭಾಗೀಯ ಸಹನಿರ್ದೇಶಕರು/ ಜಂಟಿನಿರ್ದೇಶಕರು (ಆಡಳಿತ) |
| ಈ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಕನಿಷ್ಠ (3 ರಿಂದ 5 ವರ್ಷದೊಳಗಡೆ) ಅವಧಿ ಮುಗಿದ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. (ಆಯಾ ವಿಭಾಗದೊಳಗೆ) | ಅನ್ವಯವಾಗುವುದಿಲ್ಲ | ಅನ್ವಯವಾಗುವುದಿಲ್ಲ | 26/07/2023 | ಜಂಟಿ ನಿರ್ದೇಶಕರು (ಆಡಳಿತ) ಬೆಂಗಳೂರು ಮತ್ತು ನಿರ್ದೇಶಕರು ಧಾರವಾಡ/ಕಲಬುರ್ಗಿ ಅಪರ ಆಯುಕ್ತಾಲಯ |
| **(3) ಅಂತರ್ ವಿಭಾಗೀಯ ಹಂತದ ವರ್ಗಾವಣೆ ಕ್ರಮಗಳು [ವಿಭಾಗದ ಹೊರಗೆ]** | | | | | |
| ಅ | ವಿಭಾಗದ ಹೊರಗಿನ ಕೋರಿಕೆ ವರ್ಗಾವಣೆ ಕೌನ್ಸಿಲಿಂಗ್ ಅಂತಿಮ ಖಾಲಿ ಹುದ್ದೆಗಳ ಪಟ್ಟಿ ಪ್ರಕಟ. | 25/07/2023 | 25/07/2023 | 25/07/2023 | |
| ಆ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಕೋರಿಕೆ ವರ್ಗಾವಣೆಗಳ ಗಣಕೀಕೃತ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. | 26/07/2023<br>ರಿಂದ<br>28/07/2023 | 26/07/2023<br>ರಿಂದ<br>28/07/2023 | 26/07/2023 | ನಿರ್ದೇಶಕರು ಪ್ರಾಥಮಿಕ / ಪ್ರೌಢ ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು (ಆಡಳಿತ) ಬೆಂಗಳೂರು |
| ಇ | ಅಂತಿಮ ಜ್ಯೇಷ್ಠತಾ ಪಟ್ಟಿಯಂತೆ ಪರಸ್ಪರ ವರ್ಗಾವಣೆಗಳ ಗಣಕೀಕೃತ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಪ್ರಕ್ರಿಯೆ. | 31/07/2023 | 31/07/2023 | 31/07/2023 | |

(*** ವೇಳಾಪಟ್ಟಿಯು ತಾಂತ್ರಿಕ ಕಾರಣಗಳಿಂದ ಅಡಚಣೆಯಾದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.)

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020 ಬೆಂಗಳೂರು ದಿನಾಂಕ:27/03/2020 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 8 ಇಟಿಆರ್ 2020 ದಿನಾಂಕ:22/07/2020 ಹಾಗೂ ಇಲಾಖಾ ಆದೇಶಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಂಡು, ಪ್ರಸ್ತಾಪಿತ ವರ್ಗಾವಣಾ ಪ್ರಕ್ರಿಯೆಗಳನ್ನು ಯಾವುದೇ ಲೋಪದೋಷಗಳಿಗೆ ಎಡೆಮಾಡಿಕೊಡದಂತೆ ಸಕ್ಷಮ ವರ್ಗಾವಣಾ ಪ್ರಾಧಿಕಾರಿಗಳು ತೀವ್ರ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಲು ತಿಳಿಸಿದೆ. **ಕ್ಷೇತ್ರಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರುಗಳು ಈಗಾಗಲೇ ವೇಳಾಪಟ್ಟಿಯಲ್ಲಿ ನಿಗಧಿಪಡಿಸಲಾಗಿರುವ ಅವಧಿಯ ಒಳಗೆ ಮಾಹಿತಿಗಳನ್ನು ತಂತ್ರಾಂಶದಲ್ಲಿ ಇಂದೀಕರಿಸದೇ ರಾಜ್ಯ ಕಛೇರಿಗೆ ಮಾಹಿತಿಯನ್ನು ಇಂದೀಕರಿಸಲು ಕೋರಿ ಸಲ್ಲಿಕೆಯಾಗುವ ಪ್ರಸ್ತವನೆಯನ್ನು ಪರಿಗಣಿಸಲಾಗುವುದಿಲ. ವರ್ಗಾವಣೆ ಸಂಬಂಧಿಸಿದ ನ್ಯಾಯಾಲಯದ ಪ್ರಕರಣಗಳು ದಾಖಲಾದಲ್ಲಿ ಅದಕ್ಕೆ ಸಂಬಂಧಪಟ್ಟ ಉಪನಿರ್ದೇಶಕರೇ ಖುದ್ದಾಗಿ ಸರ್ಕಾರಿ ವಕೀಲರನ್ನು ಸಂಪರ್ಕಿಸಿ ಕಂಡಿಕೆವಾರು ಉತ್ತರ ಹಾಗೂ ಆಕ್ಷೇಪಣಾ ಹೇಳಿಕೆಗಳನ್ನು ಸಲ್ಲಿಸಿ ಪ್ರಕರಣವನ್ನು ಇತ್ಯರ್ಥಪಡಿಸತಕ್ಕದ್ದು, ಇದರಲ್ಲಿ ಯಾವುದೇ ವಿಳಂಬ/ಕರ್ತವ್ಯಲೋಪ ಕಂಡುಬಂದಲ್ಲಿ ಇದಕ್ಕೆ ಸಂಬಂಧಪಟ್ಟವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.**

**ಅಭ್ಯರ್ಥಿಗಳಿಗೆ ಸೂಚನೆ:**

- ಹೊಸದಾಗಿ ಅರ್ಜಿ ಸಲಿಸಲು ಅವಕಾಶವಿರುವುದಿಲ್ಲ. ಪ್ರಕಟಿತ ಹೆಚ್ಚುವರಿ ಶಿಕ್ಷಕರ ಆದ್ಯತೆ ಸಲ್ಲಿಸುವಾಗ ಸೆಕ್ಷನ್-10(1) ರಲ್ಲಿರುವ ವಿನಾಯಿತಿ/ಆಧ್ಯತೆ ಕೋರುವ ದಾಖಲೆಗಳನ್ನು ಮತ್ತು ಇತರ ಸೇವಾ ಮಾಹಿತಿಯನ್ನು ಬಹಳ ಎಚ್ಚರಿಕೆಯಿಂದ ಅಪ್‌ಲೋಡ್ ಮಾಡತಕ್ಕದ್ದು, ತಪ್ಪಾಗಿ ಅರ್ಜಿ ಸಲ್ಲಿಸಿ ನಂತರ ತಪ್ಪು ಎಂದು ಕಂಡುಬಂದ ನಂತರ ಪರಿಷ್ಕರಣೆ/ತಿದ್ದುಪಡಿಗೆ ಹಾಗೂ ಪುನರ್ ಪರಿಶೀಲಿಸಿ ಹೊಸದಾಗಿ ಅರ್ಜಿ ಸಲ್ಲಿಸಲು ಯಾವುದೇ ಕಾರಣಕ್ಕೂ ಅವಕಾಶ ಇರುವುದಿಲ್ಲ.

(ಬಿ.ಬಿ. ಕಾವೇರಿ) ಭಾ.ಆ.ಸೇ
ಆಯುಕ್ತರು.
ಶಾಲಾ ಶಿಕ್ಷಣ ಇಲಾಖೆ. ಬೆಂಗಳೂರು

ಇವರಿಗೆ, ಅಗತ್ಯ ಕ್ರಮಕ್ಕಾಗಿ

1) ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ಹಾಗೂ ವರ್ಗಾವಣಾ ಪ್ರಾಧಿಕಾರಿಗಳು ಇವರಿಗೆ
2) ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3) ನಿರ್ದೇಶಕರು, ಅಪರ ಆಯುಕ್ತರ ಕಛೇರಿ ಗುಲ್ಬರ್ಗಾ/ಧಾರವಾಡ
4) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು /ಬೆಳಗಾವಿ/ಕಲಬುರಗಿ
5) ಶಾಲಾ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)
6) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರು [ಆಡಳಿತ] ರವರ ಮೂಲಕ)

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ) ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ರವರ ಆದ್ಯ ಅವಗಾಹನೆಗಾಗಿ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ .
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
6. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರುಗಿ ಮತ್ತು ಧಾರವಾಡ ಇವರಿಗೆ ಮಾಹಿತಿ ಮತ್ತು ಕ್ರಮಕ್ಕಾಗಿ.
7. ಶಾಲಾ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
8. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು-01 ರವರಿಗೆ ಪ್ರತಿಯನ್ನು ರವಾನಿಸುತ್ತಾ, ಉದ್ದೇಶಿತ ವರ್ಗಾವಣೆ ಪ್ರಕ್ರಿಯೆಗೆ "ತಂತ್ರಾಂಶವನ್ನು" ನಿಯಮಗಳಡಿ ಸಜ್ಜುಗೊಳಿಸಿ ಯಾವುದೇ ಲೋಪಗಳು ಉದ್ಭವಿಸದಂತೆ, ಸೂಕ್ತ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
9. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
10. ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಣೆಗಾಗಿ ಇ-ಆಡಳಿತ ಶಾಖೆಗೆ.
11. ಕಛೇರಿ ಪ್ರತಿ.